12

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 320
ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
ಉತ್ತರಿಸಬೇಕಾದ ದಿನಾಂಕ : 06.12.2023
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಪ್ರಶ್ನೆ | ಉತ್ತರ |
|---|---|
| **(ಅ)** ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳನ್ನು ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಲಾಗಿದೆ; ಮಾಡಿದ್ದಲ್ಲಿ ಸರ್ಕಾರದಿಂದ ಎಷ್ಟು ಪರಿಹಾರ ಧನ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯ ಬರ ನಿರ್ವಹಣೆ ಕೈಪಿಡಿ 2020 ರನ್ವಯ ವಿವಿಧ ಅವಧಿಯ ಹವಮಾನ ಪರಿಸ್ಥಿತಿ ಅನುಗುಣವಾಗಿ ಒಟ್ಟಾರೆ ರಾಜ್ಯದ 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳನ್ನು (196 ತೀವ್ರ ಬರ & 27 ಸಾಧರಣ ಬರ) ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. (ತಾಲ್ಲೂಕುವಾರು ಪಟ್ಟಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ).<br><br>ಮೇವಿನ ಕೊರತೆ ಉಂಟಾಗದಂತೆ ರೈತರಿಗೆ ಮೇವಿನ ಬೀಜ ವಿತರಿಸಿ, ಹಸಿರು ಮೇವು ಬೆಳೆಸಲು SDRF ನಿಧಿ ಅಡಿಯಲ್ಲಿ ಮೇವಿನ ಕಿರುಪೊಟ್ಟಣಗಳನ್ನು (Mini Fodder Kit) ಖರೀದಿಸಲು ರೂ. 20.00 ಕೋಟಿಗಳನ್ನು ದಿನಾಂಕ 22.09.2023 ರಂದು ಪಶು ಸಂಗೋಪನೆ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.<br><br>ಬರ ಪರಿಹಾರ ಕಾರ್ಯಗಳಿಗಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿ (SDRF)ರಡಿ ಪ್ರತಿ ಬರಪೀಡಿತ ತಾಲ್ಲೂಕಿಗೆ ರೂ.150.00 ಲಕ್ಷಗಳಂತೆ ಒಟ್ಟು ರೂ. 32400.00 ಲಕ್ಷಗಳನ್ನು ದಿನಾಂಕ 31.10.2023 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಬಿಡುಗಡೆಗೊಳಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಿದೆ.<br><br>ಬರ ನಿರ್ವಹಣೆಗೆ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ದಿನಾಂಕ 27.11.2023 ರಂದು ರೂ.775.83 ಕೋಟಿಗಳು ಲಭ್ಯವಿದ್ದು, ಜಿಲ್ಲಾವಾರು ವಿವರವನ್ನು **ಅನುಬಂಧ- 3** ರಲ್ಲಿ ಒದಗಿಸಿದೆ. ಹಾಗೂ ತಹಶಿಲ್ದಾರರ ಪಿ.ಡಿ. ಖಾತೆಗಳಲ್ಲಿ ಒಟ್ಟು ರೂ. 119.28 ಕೋಟಿಗಳ ಅನುದಾನ ಲಭ್ಯವಿರುತ್ತದೆ.<br><br>ಬರ ಪರಿಸ್ಥಿತಿಯ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದಿಂದ NDRF ಅನುದಾನವನ್ನು ನಿರೀಕ್ಷಿಸಿ SDRF/NDRF ಮಾರ್ಗಸೂಚಿಗಳ ಪ್ರಕಾರ ಬೆಳೆ ಹಾನಿ ಪರಿಹಾರದ ಮೊದಲನೆ ಕಂತಾಗಿ/ ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗೋಣವಾಗಿ ರೂ.2,000/- ರವರೆಗೆ ಅರ್ಹ ರೈತರಿಗೆ ಪಾವತಿಲು ತೀರ್ಮಾನಿಸಿದೆ. |
| **(ಆ)** ಈ ಬರಗಾಲ ಪೀಡಿತ ಪ್ರದೇಶದ ಎಷ್ಟು ಜನರಿಗೆ ಪರಿಹಾರ ಧನ ನೀಡಲಾಗಿದೆ; (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು) | ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನುಸಾರ ರೂ. 18171.44 ಕೋಟಿಗಳ ಆರ್ಥಿಕ ನೆರವನ್ನು NDRF ರಡಿ ಕೋರಿ ಮೆಮೋರಾಂಡಂ ಸಲ್ಲಿಸಿದ್ದು, ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ. |
| **(ಇ)** ಪರಿಹಾರ ನೀಡದೆ ಇದ್ದಲ್ಲಿ ಯಾವ ಯಾವ ಕಾರಣಕ್ಕಾಗಿ ನೀಡಿರುವುದಿಲ್ಲ ಯಾವ ಕಾಲಮಿತಿಯೊಳಗಡೆ ಪರಿಹಾರ ನೀಡಲಾಗುವುದು; | ಕೇಂದ್ರ ಸರ್ಕಾರಕ್ಕೆ NDRF ಅಡಿಯಲ್ಲಿ ಬರ ನಿರ್ವಹಣೆಗೆ ಕೋರಿರುವ ಆರ್ಥಿಕ ನೆರವಿನ ಸಂಕ್ಷಿಪ್ತ ವಿವರವನ್ನು **ಅನುಬಂಧ-4** ರಲ್ಲಿ ಒದಗಿಸಿದೆ. |

| ಪ್ರಶ್ನೆ | ಉತ್ತರ |
|---|---|
| **(ಈ)** ಬರ ಪರಿಸ್ಥಿತಿಯಿಂದ ರಾಜ್ಯದ ರೈತರಿಗೆ ಮತ್ತು ಸರ್ಕಾರಕ್ಕೆ ಎಷ್ಟು ನಷ್ಟವಾಗಿದೆ; ಬರ ಪರಿಸ್ಥಿತಿ ಎದುರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಬರ ಪರಿಸ್ಥಿತಿಯಿಂದ ರಾಜ್ಯದ ರೈತರಿಗೆ ರೂ. 35162 ಕೋಟಿಗಳ ನಷ್ಟವಾಗಿದೆ. ಬರ ಪರಿಸ್ಥಿತಿ ಎದುರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳನ್ನು **ಅನುಬಂಧ-5** ರಲ್ಲಿ ಒದಗಿಸಿದೆ. |

ಕಂಇ 547 ಟಿಎನ್ಆರ್ 2023

(ಕೃಷ್ಣ ಭೈರೇಗೌಡ)
ಕಂದಾಯ ಸಚಿವರು

ವಿ.ಪ. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: ೨೩೦

ಅನುಬಂಧ-1



## 2023ರ ಮುಂಗಾರಿನಲ್ಲಿ ತೀವ್ರ ಬರ ಪೀಡಿತ 196 ತಾಲ್ಲೂಕುಗಳ ಪಟ್ಟಿ

| ಕ್ರ. ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂ | ಕ್ರ. ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು |
|---|---|---|---|---|---|---|---|
| 1 | ಬೆಂಗಳೂರು ನಗರ | 1 | ಬೆಂಗಳೂರು ಪೂರ್ವ | | | 42 | ಜಗಳೂರು |
| | | 2 | ಬೆಂಗಳೂರು ಉತ್ತರ | | | 43 | ನ್ಯಾಮತಿ |
| 2 | ಬೆಂಗಳೂರು ಗ್ರಾಮಾಂತರ | 3 | ದೇವನಹಳ್ಳಿ | 9 | ಮೈಸೂರು | 44 | ಹೆಚ್.ಡಿ.ಕೋಟೆ |
| | | 4 | ದೊಡ್ಡ ಬಳ್ಳಾಪುರ | | | 45 | ಹುಣಸೂರು |
| | | 5 | ಹೊಸಕೋಟೆ | | | 46 | ಮೈಸೂರು |
| | | 6 | ನೆಲಮಂಗಲ | | | 47 | ನಂಜನಗೂಡು |
| 3 | ರಾಮನಗರ | 7 | ಕನಕಪುರ | | | 48 | ಪಿರಿಯಾಪಟ್ಟಣ |
| | | 8 | ರಾಮನಗರ | | | 49 | ಟಿ.ನರಸೀಪುರ |
| | | 9 | ಹಾರೋಹಳ್ಳಿ | | | 50 | ಸರಗೂರು |
| 4 | ಕೋಲಾರ | 10 | ಬಂಗಾರಪೇಟೆ | | | 51 | ಸಾಲಿಗ್ರಾಮ |
| | | 11 | ಕೋಲಾರ | | | 52 | ಕೆ.ಆರ್. ನಗರ |
| | | 12 | ಮುಳಬಾಗಿಲು | 10 | ಮಂಡ್ಯ | 53 | ಕೃಷ್ಣರಾಜಪೇಟೆ |
| | | 13 | ಶ್ರೀನಿವಾಸಪುರ | | | 54 | ಮದ್ದೂರು |
| | | 14 | ಕೆ.ಜಿ.ಎಫ್ | | | 55 | ಮಳವಳ್ಳಿ |
| | | 15 | ಮಾಲೂರು | | | 56 | ಮಂಡ್ಯ |
| 5 | ಚಿಕ್ಕಬಳ್ಳಾಪುರ | 16 | ಬಾಗೇಪಲ್ಲಿ | | | 57 | ನಾಗಮಂಗಲ |
| | | 17 | ಚಿಕ್ಕಬಳ್ಳಾಪುರ | | | 58 | ಪಾಂಡವಪುರ |
| | | 18 | ಚಿಂತಾಮಣಿ | | | 59 | ಶ್ರೀರಂಗಪಟ್ಟಣ |
| | | 19 | ಗೌರಿಬಿದನೂರು | 11 | ಬಳ್ಳಾರಿ | 60 | ಬಳ್ಳಾರಿ |
| | | 20 | ಗುಡಿಬಂಡ | | | 61 | ಸಂಡೂರು |
| | | 21 | ಶಿಡ್ಲಘಟ್ಟ | | | 62 | ಶಿರುಗುಪ್ಪ |
| 6 | ತುಮಕೂರು | 22 | ಚಿಕ್ಕನಾಯಕನಹಳ್ಳಿ | | | 63 | ಕುರುಗೋಡು |
| | | 23 | ಗುಬ್ಬಿ | | | 64 | ಕಂಪ್ಲಿ |
| | | 24 | ಕೊರಟಗೆರೆ | 12 | ಕೊಪ್ಪಳ | 65 | ಗಂಗಾವತಿ |
| | | 25 | ಕುಣಿಗಲ್ | | | 66 | ಕೊಪ್ಪಳ |
| | | 26 | ಮಧುಗಿರಿ | | | 67 | ಕುಷ್ಟಗಿ |
| | | 27 | ಪಾವಘಡ | | | 68 | ಯಲಬುರ್ಗ |
| | | 28 | ಶಿರಾ | | | 69 | ಕರಟಗಿ |
| | | 29 | ತಿಪಟೂರು | | | 70 | ಕುಕನೂರು |
| | | 30 | ತುರುವೇಕೆರೆ | | | 71 | ಕನಕಗಿರಿ |
| | | 31 | ತುಮಕೂರು | 13 | ರಾಯಚೂರು | 72 | ಲಿಂಗಸುಗೂರು |
| 7 | ಚಿತ್ರದುರ್ಗ | 32 | ಚಳ್ಳಕೆರೆ | | | 73 | ಮಾನ್ವಿ |
| | | 33 | ಚಿತ್ರದುರ್ಗ | | | 74 | ರಾಯಚೂರು |
| | | 34 | ಹಿರಿಯೂರು | | | 75 | ಶಿರವಾರ |
| | | 35 | ಹೊಳಲಕೆರೆ | | | 76 | ದೇವದರ್ಗ |
| | | 36 | ಹೊಸದುರ್ಗ | | | 77 | ಮಸ್ಕಿ |
| | | 37 | ಮೊಳಕಾಲ್ಮೂರು | | | 78 | ಸಿಂಧನೂರು |
| 8 | ದಾವಣಗೆರೆ | 38 | ಚನ್ನಗಿರಿ | 14 | ಕಲಬುರಗಿ | 79 | ಅಫಜಲ್‌ಪುರ |
| | | 39 | ದಾವಣಗೆರೆ | | | 80 | ಆಳಂದ |
| | | 40 | ಹರಿಹರ | | | 81 | ಚಿಂಚೋಳಿ |
| | | 41 | ಹೊನ್ನಾಳಿ | | | 82 | ಚಿತ್ತಾಪುರ |

| ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಕ್ರ.ಸಂ | ಜಿಲ್ಲೆ | ಕ್ರ.ಸಂ | ತಾಲೂ |
|---|---|---|---|---|---|---|---|
| | | 83 | ಕಲಬುರಗಿ | | | 129 | ನಿಡಗುಂದಿ |
| | | 84 | ಜೇವರ್ಗಿ | | | 130 | ತಾಲಿಕೋಟೆ |
| | | 85 | ಸೇಡಂ | | | 131 | ಕೊಲ್ಹಾರ |
| | | 86 | ಕಳಗಿ | | | 132 | ದೇವರಹಿಪ್ಪರಗಿ |
| | | 87 | ಕಮಲಪುರ | | | 133 | ಆಲಮೇಲ |
| | | 88 | ಯಡ್ರಾಮಿ | | | 134 | ತಿಕೋಟಾ |
| | | 89 | ಶಾಹಬಾದ್ | 19 | ಗದಗ | 135 | ಗದಗ |
| 15 | ಬೀದರ್ | 90 | ಬಾಲ್ಕಿ | | | 136 | ನರಗುಂದ |
| | | 91 | ಬಸವಕಲ್ಯಾಣ | | | 137 | ರೋಣ |
| | | 92 | ಹುಲಸೂರು | | | 138 | ಶಿರಹಟ್ಟಿ |
| | | 93 | ಔರಾದ್ | | | 139 | ಗಜೇಂದ್ರಘಡ |
| | | 94 | ಬೀದರ್ | | | 140 | ಲಕ್ಷ್ಮೇಶ್ವರ |
| | | 95 | ಚಿಟಗುಪ್ಪಾ | | | 141 | ಮುಂಡರಗಿ |
| | | 96 | ಹುಮ್ನಾಬಾದ್ | 20 | ಹಾವೇರಿ | 142 | ಹಾವೇರಿ |
| | | 97 | ಕಮಲನಗರ | | | 143 | ಹಿರೇಕೆರೂರ್ |
| 16 | ಬೆಳಗಾವಿ | 98 | ಅಥಣಿ | | | 144 | ರಾಣೆಬೆನ್ನೂರು |
| | | 99 | ಬೈಲಹೊಂಗಲ | | | 145 | ಸವಣೂರು |
| | | 100 | ಚಿಕ್ಕೋಡಿ | | | 146 | ರಟ್ಟಿಹಳ್ಳಿ |
| | | 101 | ಗೋಕಾಕ್ | | | 147 | ಬ್ಯಾಡಗಿ |
| | | 102 | ಹುಕ್ಕೇರಿ | | | 148 | ಹಾನಗಲ್ |
| | | 103 | ರಾಮದುರ್ಗ | | | 149 | ಶಿಗ್ಗಾವ್ |
| | | 104 | ರಾಯಬಾಗ್ | 21 | ಧಾರವಾಡ | 150 | ಧಾರವಾಡ |
| | | 105 | ಸವದತ್ತಿ | | | 151 | ಹುಬ್ಬಳ್ಳಿ |
| | | 106 | ಕಿತ್ತೂರು | | | 152 | ಕುಂದಗೋಳ |
| | | 107 | ನಿಪ್ಪಾಣಿ | | | 153 | ನವಲಗುಂದ |
| | | 108 | ಕಾಗವಾಡ | | | 154 | ಹುಬ್ಬಳ್ಳಿನಗರ |
| | | 109 | ಮುದಲಗಿ | | | 155 | ಅಳ್ನಾವರ |
| | | 110 | ಯರಗಟ್ಟಿ | | | 156 | ಅಣ್ಣಿಗೇರಿ |
| | | 111 | ಬೆಳಗಾವಿ | | | 157 | ಕಲಘಟಗಿ |
| | | 112 | ಖಾನಾಪುರ | 22 | ಶಿವಮೊಗ್ಗ | 158 | ಭದ್ರಾವತಿ |
| 17 | ಬಾಗಲಕೋಟೆ | 113 | ಭಾದಮಿ | | | 159 | ಹೊಸನಗರ |
| | | 114 | ಬಾಗಲಕೋಟೆ | | | 160 | ಸಾಗರ |
| | | 115 | ಬಿಳಗಿ | | | 161 | ಶಿಕಾರಿಪುರ |
| | | 116 | ಹುನಗುಂದ | | | 162 | ಶಿವಮೊಗ್ಗ |
| | | 117 | ಜಮಖಂಡಿ | | | 163 | ಸೊರಬ |
| | | 118 | ಮುಧೋಳ | | | 164 | ತೀರ್ಥಹಳ್ಳಿ |
| | | 119 | ಗುಳೇದಗುಡ್ಡ | 23 | ಹಾಸನ | 165 | ಅರಕಲಗೂಡು |
| | | 120 | ಇಳಕಲ್ | | | 166 | ಆಲೂರು |
| | | 121 | ರಬಕವಿ ಬನಹಟ್ಟಿ | | | 167 | ಅರಸೀಕೆರೆ |
| 18 | ವಿಜಯಪುರ | 122 | ಬಸವನ ಬಾಗೇವಾಡಿ | | | 168 | ಹಾಸನ |
| | | 123 | ವಿಜಯಪುರ | | | 169 | ಬೇಲೂರು |
| | | 124 | ಇಂಡಿ | | | 170 | ಚನ್ನರಾಯಪಟ್ಟಣ |
| | | 125 | ಮುದ್ದೆಬಿಹಾಳ್ | | | 171 | ಹೊಳೆನರಸೀಪುರ |
| | | 126 | ಸಿಂದಗಿ | 24 | ಚಿಕ್ಕಮಗಳೂರು | 172 | ಕಡೂರು |
| | | 127 | ಬಬ್ಲೇಶ್ವರ | | | 173 | ಅಜ್ಜಂಪುರ |
| | | 128 | ಚಡಚಣ | 25 | ಕೊಡಗು | 174 | ಮಡಿಕೇರಿ |

| ಕ್ರ. ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಕ್ರ. ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು |
|---|---|---|---|---|---|---|---|
| | | 175 | ವಿರಾಜಪೇಟೆ | 28 | ಯಾದಗಿರಿ | 186 | ಶಹಾಪುರ |
| | | 176 | ಕುಶಾಲನಗರ | | | 187 | ವಡಗೇರಾ |
| | | 177 | ಪೊನ್ನಂಪೇಟೆ | 29 | ವಿಜಯನಗರ | 188 | ಹೊಸಪೇಟೆ |
| | | 178 | ಸೋಮವಾರಪೇಟೆ | | | 189 | ಹಡಗಲಿ |
| 26 | ಉಡುಪಿ | 179 | ಕಾರ್ಕಳ | | | 190 | ಹಗರಿಬೊಮ್ಮನಹಳ್ಳಿ |
| | | 180 | ಹೆಬ್ರಿ | | | 191 | ಹರಪ್ಪನಹಳ್ಳಿ |
| 27 | ಉತ್ತರ ಕನ್ನಡ | 181 | ಹಳಿಯಾಳ | | | 192 | ಕೊಟ್ಟೂರು |
| | | 182 | ಮುಂಡಗೋಡ್ | | | 193 | ಕೂಡ್ಲಿಗಿ |
| | | 183 | ಶಿರಸಿ | 30 | ಚಾಮರಾಜನಗರ | 194 | ಚಾಮರಾಜನಗರ |
| | | 184 | ಯಲ್ಲಾಪುರ | | | 195 | ಗುಂಡ್ಲುಪೇಟೆ |
| | | 185 | ದಾಂಡೇಲಿ | | | 196 | ಹನೂರು |

## 2023ರ ಮುಂಗಾರಿನಲ್ಲಿ ಸಾಧಾರಣ ಬರ ಪೀಡಿತ 27 ತಾಲ್ಲೂಕುಗಳ ಪಟ್ಟಿ

| ಕ್ರ. ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು | ಕ್ರ. ಸಂ | ಜಿಲ್ಲೆ | ಕ್ರ.ಸಂ | ತಾಲ್ಲೂಕು |
|---|---|---|---|---|---|---|---|
| 1 | ಬೆಂಗಳೂರು ನಗರ | 1 | ಅನೇಕಲ್ | 6 | ಉಡುಪಿ | 15 | ಬ್ರಹ್ಮಾವರ |
| | | 2 | ಬೆಂಗಳೂರು ದಕ್ಷಿಣ | 7 | ಉತ್ತರ ಕನ್ನಡ | 16 | ಅಂಕೋಲ |
| | | 3 | ಯಲಹಂಕ | | | 17 | ಭಟ್ಕಳ |
| 2 | ರಾಮನಗರ | 4 | ಚನ್ನಪಟ್ಟಣ | | | 18 | ಕಾರವಾರ |
| | | 5 | ಮಾಗಡಿ | | | 19 | ಕುಮಟ |
| 3 | ಚಾಮರಾಜನಗರ | 6 | ಯಳಂದೂರು | | | 20 | ಜೋಯಿಡ (ಸೂಪ) |
| | | 7 | ಕೊಳ್ಳೆಗಾಲ | | | 21 | ಸಿದ್ದಾಪುರ |
| 4 | ಚಿಕ್ಕಮಗಳೂರು | 8 | ಮೂಡಿಗೆರೆ | 8 | ಯಾದಗಿರಿ | 22 | ಶೋರಾಪುರ |
| | | 9 | ತರೀಕೆರೆ | | | 23 | ಯಾದಗಿರಿ |
| | | 10 | ಕೊಪ್ಪ | | | 24 | ಗುರುಮಿಟ್ಕಲ್ |
| | | 11 | ನರಸಿಂಹರಾಜಪುರ | | | 25 | ಹುಣಸಗಿ |
| | | 12 | ಶೃಂಗೇರಿ | 9 | ಹಾಸನ | 26 | ಸಕಲೇಶಪುರ |
| 5 | ದಕ್ಷಿಣ ಕನ್ನಡ | 13 | ಮಂಗಳೂರು | 10 | ಉಡುಪಿ | 27 | ಬ್ರಹ್ಮಾವರ |
| | | 14 | ಮುಡಬಿದ್ರೆ | | | | |

# ಅನುಬಂಧ-2

## ಬರ ನಿರ್ವಹಣೆಗಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿ (SDRF) ರಡಿ ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ದಿನಾಂಕ 31.10.2023 ರಂದು ಬಿಡುಗಡೆ ಮಾಡಲಾಗಿರುವ ಅನುದಾನದ ವಿವರ

(ರೂ ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ | ಬಿಡುಗಡೆಗೊಳಿಸಲಾದ ಅನುದಾನ |
|---|---|---|
| 1 | ಬೆಂಗಳೂರು ಗ್ರಾಮಾಂತರ | 750.00 |
| 2 | ಬೆಂಗಳೂರು ನಗರ | 600.00 |
| 3 | ಕೊಪ್ಪಳ | 1050.00 |
| 4 | ಗದಗ | 1050.00 |
| 5 | ಚಿಕ್ಕಬಳ್ಳಾಪುರ | 900.00 |
| 6 | ಬೆಳಗಾವಿ | 2250.00 |
| 7 | ಬಾಗಲಕೋಟೆ | 1350.00 |
| 8 | ಯಾದಗಿರಿ | 900.00 |
| 9 | ಬಳ್ಳಾರಿ | 750.00 |
| 10 | ರಾಯಚೂರು | 900.00 |
| 11 | ಶಿವಮೊಗ್ಗ | 1050.00 |
| 12 | ಬೀದರ್ | 450.00 |
| 13 | ವಿಜಯಪುರ (ಬಿಜಾಪುರ) | 1800.00 |
| 14 | ಚಾಮರಾಜನಗರ | 750.00 |
| 15 | ಚಿಕ್ಕಮಗಳೂರು | 1200.00 |
| 16 | ಚಿತ್ರದುರ್ಗ | 900.00 |
| 17 | ದಕ್ಷಿಣ ಕನ್ನಡ | 300.00 |
| 18 | ದಾವಣಗೆರೆ | 900.00 |
| 19 | ಕಲಬುರಗಿ | 1650.00 |
| 20 | ಹಾಸನ | 1200.00 |
| 21 | ಹಾವೇರಿ | 1200.00 |
| 22 | ಕೊಡಗು | 750.00 |
| 23 | ಕೋಲಾರ | 900.00 |
| 24 | ಮಂಡ್ಯ | 1050.00 |
| 25 | ಮೈಸೂರು | 1350.00 |
| 26 | ರಾಮನಗರ | 750.00 |
| 27 | ತುಮಕೂರು | 1500.00 |
| 28 | ಉತ್ತರ ಕನ್ನಡ | 1650.00 |
| 29 | ಧಾರವಾಡ | 1200.00 |
| 30 | ಉಡುಪಿ | 450.00 |
| 31 | ವಿಜಯನಗರ | 900.00 |
| **ಒಟ್ಟು** | | **32400.00** |

ವಿ.ಪ. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 320 5

## ಅನುಬಂಧ-3

## ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಲಭ್ಯವಿರುವ ಅನುದಾನದ ವಿವರ

**(As on 27-11-2023)**

| ಕ್ರ. ಸಂ. | ಜಿಲ್ಲೆ | ಲಭ್ಯವಿರುವ ಅನುದಾನ |
|---|---|---|
| 1 | ಬೆಂಗಳೂರು ಗ್ರಾಮಾಂತರ | 21,87,83,653 |
| 2 | ಬೆಂಗಳೂರು ನಗರ | 25,44,55,774 |
| 3 | ಕೊಪ್ಪಳ | 18,09,52,159 |
| 4 | ಗದಗ | 18,69,57,050 |
| 5 | ಚಿಕ್ಕಬಳ್ಳಾಪುರ | 20,78,73,644 |
| 6 | ಬೆಳಗಾವಿ | 56,19,20,497 |
| 7 | ಬಾಗಲಕೋಟೆ | 20,52,05,553 |
| 8 | ಯಾದಗಿರಿ | 23,99,05,502 |
| 9 | ಬಳ್ಳಾರಿ | 30,85,16,189 |
| 10 | ರಾಯಚೂರು | 24,93,71,089 |
| 11 | ಶಿವಮೊಗ್ಗ | 24,64,63,658 |
| 12 | ಬೀದರ್ | 6,26,35,455 |
| 13 | ವಿಜಯಪುರ (ಬಿಜಾಪುರ) | 33,98,53,740 |
| 14 | ಚಾಮರಾಜನಗರ | 23,36,54,238 |
| 15 | ಚಿಕ್ಕಮಗಳೂರು | 26,01,75,423 |
| 16 | ಚಿತ್ರದುರ್ಗ | 19,60,48,798 |
| 17 | ದಕ್ಷಿಣ ಕನ್ನಡ | 12,94,49,917 |
| 18 | ದಾವಣಗೆರೆ | 17,06,38,990 |
| 19 | ಕಲಬುರಗಿ | 49,89,37,596 |
| 20 | ಹಾಸನ | 22,14,76,339 |
| 21 | ಹಾವೇರಿ | 23,13,18,136 |
| 22 | ಕೊಡಗು | 53,40,38,999 |
| 23 | ಕೋಲಾರ | 32,97,38,426 |
| 24 | ಮಂಡ್ಯ | 19,27,04,901 |
| 25 | ಮೈಸೂರು | 14,99,13,137 |
| 26 | ರಾಮನಗರ | 22,49,09,868 |
| 27 | ತುಮಕೂರು | 22,70,90,344 |
| 28 | ಉತ್ತರ ಕನ್ನಡ | 36,24,47,726 |
| 29 | ಧಾರವಾಡ | 18,09,59,810 |
| 30 | ಉಡುಪಿ | 12,95,34,240 |
| 31 | ವಿಜಯನಗರ | 22,23,85,848 |
| ಒಟ್ಟು | | **7,75,83,16,699** |

[illegible]

ಅನುಬಂಧ-4

## SUMMARY OF LOSS AND RELIEF CLAIMED AS PER SDRF NORMS DUE TO DROUGHT DURING KHARIF 2023

( Rs. in Crore)

| Sl. No | Item | 216 Taluks | | 7 Taluks | | Total for 223 Taluks | |
|---|---|---|---|---|---|---|---|
| | | Estimated Loss | Relief claimed | Estimated Loss | Relief claimed | Estimated Loss | Relief claimed |
| 1 | **Agriculture Crop loss (46.09 lakhs Ha)** | 30868.34 | 4184.49 | 1376.89 | 246.9 | 32245.23 | 4431.39 |
| 2 | **Horticulture Crop Loss (2.06 lakh ha)** | 2901.76 | 229.8 | 15.06 | 1.93 | 2916.82 | 231.73 |
| | **Sub Total** | **33770.1** | **4414.29** | **1391.95** | **248.83** | **35162.05** | **4663.12** |
| 3 | **Animal Husbandry** | | | | | | |
| | Assistance for opening 223 cattle camps | | 115.56 | | 3.75 | | 119.31 |
| | Assistance for opening 713 Fodder banks | | 139.84 | | 4.53 | | 144.37 |
| | Medicines | | 25 | | | | 25 |
| | Nutritional supplements | | 25 | | | | 25 |
| | Fodder seed minikits | | 50 | | | | 50 |
| | **Sub Total** | | **355.4** | | **8.28** | | **363.68** |
| 4 | **Drinking Water in drought taluks** | | | | | | |
| | a. Drinking water supply in rural areas for 180 days | | 340.2 | | 12.6 | | 352.8 |
| | b. Drinking water supply in urban areas for 180 days | | 213.98 | | | | 213.98 |
| | **Sub Total** | | **554.18** | | **12.6** | | **566.78** |
| 5 | Gratuitous Relief to families whose livelihood is seriously affected due to drought for 90 days | | **12577.9** | | | | **12577.9** |
| | **Total (Total of 1 to 5)** | **33770.10** | **17901.73** | **1391.95** | **269.71** | **35,162.05** | **18171.44** |

**Total estimated loss due to crop damage in the State : Rs. 35,162.05 Crore**

**Assistance sought from Government of India under NDRF: Rs. 18,171.44 Crore**

ಲಿ.ಪ. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 320 3

**ಅನುಬಂಧ-5.**

**2023ರ ಮುಂಗಾರು ಬರ ನಿರ್ವಹಣೆಗಾಗಿ ಸರ್ಕಾರದಿಂದ ಕೈಗೊಂಡ ಕ್ರಮಗಳು**

1) 2023 ರ ಮುಂಗಾರಿನಲ್ಲಿ (ಜೂನ್ ರಿಂದ ಸೆಪ್ಟೆಂಬರ್ ವರೆಗೆ) ಶೇ. 25 ರಷ್ಟು ಮಳೆಕೊರತೆ ಕಂಡು ಬಂದಿದೆ. ಕೇಂದ್ರ ಸರ್ಕಾರದ ಬರ ಕೈಪಿಡಿ-2020 ರಲ್ಲಿ ಬರ ಪರಿಸ್ಥಿತಿ ಘೋಷಿಸಲು ಅನುಸರಿಸಬೇಕಾದ ಮಾನದಂಡಗಳನ್ನು ಹಂತ-1 ರಲ್ಲಿ ಕಡ್ಡಾಯ ಮಾನದಂಡಗಳಾದ ಮಳೆ ಕೊರತೆ (ಶೇ.60ಕ್ಕಿಂತ ಹೆಚ್ಚು) ಅಥವಾ ಸತತ ಮೂರು ವಾರಗಳ ಅಥವಾ ಅದಕ್ಕಿಂತ ಹೆಚ್ಚು ಶುಷ್ಕ ವಾತಾವರಣ (Dry Spell) ಕಂಡು ಬಂದಿರಬೇಕು. ಹಂತ-2 ರಲ್ಲಿ ತತ್ಪರಿಣಾಮ ಮಾನದಂಡಗಳಾದ ಕೃಷಿ ಬಿತ್ತನೆ ಪ್ರದೇಶ, ಉಪಗ್ರಹ ಆಧಾರಿತ ಬೆಳೆ ಆರೋಗ್ಯ ಸೂಚ್ಯಂಕ (NDVI/ NDWI-Dev (%) and VIC (%)) ತೇವಾಂಶ ಕೊರತೆ (MAI) ಹಾಗೂ ನದಿಗಳಲ್ಲಿನ ಹರಿವು, ಜಲಾಶಯಗಳ ನೀರಿನ ಸಂಗ್ರಹಣೆ ಹಾಗೂ ಅಂತರ್ಜಲ ಮಟ್ಟ ಸೂಚ್ಯಂಕಗಳಲ್ಲಿನ ತೀವ್ರತೆಯನ್ನು ಪರಿಶೀಲಿಸಿ ಬರಕ್ಕೆ ತುತ್ತಾಗಿರುವ ತಾಲ್ಲೂಕುಗಳನ್ನು ಗುರುತಿಸಿ, ಬೆಳೆ ಸಮೀಕ್ಷೆ ದೃಢೀಕರಣ (Ground Truthing) ವರದಿ ಜಿಲ್ಲಾಧಿಕಾರಿಗಳಿಂದ ಪಡೆದು, ಬರ ವರ್ಗೀಕರಣ (ಸಾಧಾರಣ & ತೀವ್ರ) ಮಾಡಲಾಗಿದೆ.

2) ಮಾನ್ಯ ಮುಖ್ಯಮಂತ್ರಿಗಳು ಮತ್ತು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (KSDMA) ಅಧ್ಯಕ್ಷರು ಜೂನ್ 1 ರಿಂದ ಇಲ್ಲಿಯವರೆಗೆ ಮೂರು ಬಾರಿ ರಾಜ್ಯದಲ್ಲಿನ ಬರ ಪರಿಸ್ಥಿತಿ ಹಾಗೂ ಕೈಗೊಂಡ ಕ್ರಮಗಳ ಕುರಿತು ಸಭೆ ನಡೆಸಿ ಪರಿಶೀಲಿಸಿದ್ದಾರೆ.

3) ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ರಾಜ್ಯದಲ್ಲಿ ಬರ, ಪ್ರವಾಹ ಮತ್ತು ಇತರೆ ನೈಸರ್ಗಿಕ ವಿಕೋಪಗಳಿಂದುದ್ಭವಿಸಬಹುದಾದ ಪರಿಸ್ಥಿತಿಯನ್ನು ಪರಾಮರ್ಶಿಸಲು ಮತ್ತು ಇದನ್ನು ಸಮರ್ಥವಾಗಿ ನಿಭಾಯಿಸಲು ಹಾಗೂ ಅಗತ್ಯ ನಿರ್ದೇಶನಗಳನ್ನು ನೀಡಲು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲಾಗಿದೆ. ಜೂನ್ 1 ರಿಂದ ಇಲ್ಲಿಯವರೆಗೆ 10 ಬಾರಿ ಸಭೆ ನಡೆಸಿ ರಾಜ್ಯದಲ್ಲಿನ ಬರ ಪರಿಸ್ಥಿತಿ ಪರಿಶೀಲಿಸಿ ನಿರ್ವಹಣೆಗೆ ಅಗತ್ಯ ಸಲಹೆ ಹಾಗೂ ಕ್ರಮಗಳ ಕುರಿತು ತೀರ್ಮಾನಿಸಿದೆ.

4) ಮಾನ್ಯ ಕಂದಾಯ ಸಚಿವರು 4 ಕಂದಾಯ ವಿಭಾಗಗಳಲ್ಲಿ ಬರ ಪರಿಸ್ಥಿತಿಯ ಪರಿಶೀಲನಾ ಸಭೆಗಳನ್ನು ನಡೆಸಿ ಅಗತ್ಯ ಕ್ರಮಗಳು ತೆಗೆದುಕೊಂಡಿರುವ ಬಗ್ಗೆ ಪರಿಶೀಲಿಸಿ ಸೂಚನೆಗಳನ್ನು ನೀಡಿರುತ್ತಾರೆ ಹಾಗೂ ರಾಜ್ಯದ 22 ಜಿಲ್ಲೆಗಳಿಗೆ ಭೇಟಿ ನೀಡಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಬರ ಪರಿಸ್ಥಿತಿಯ ಪರಿಶೀಲನಾ ಸಭೆಗಳನ್ನು ನಡೆಸಿರುತ್ತಾರೆ. ಇದಲ್ಲದೇ, 3 ಬಾರಿ ಎಲ್ಲಾ ಜಿಲ್ಲಾಧಿಕಾರಿಗಳೊಡನೆ ಸಭೆ ನಡೆಸಿರುತ್ತಾರೆ.

5) ರಾಜ್ಯ ಮಟ್ಟದ ಹವಾಮಾನ ಕಣ್ಗಾವಲು ಸಮಿತಿಯು ವಾರಕ್ಕೊಮ್ಮೆ ಹವಾಮಾನ, ಜಲಾಶಯಗಳ ನೀರಿನ ಸಂಗ್ರಹಣಾ, ಸಣ್ಣ ನೀರಾವರಿ ಕೆರೆಗಳಲ್ಲಿನ ನೀರಿನ ಸಂಗ್ರಹಣಾ, ಅಂತರ್ಜಲ ಮಟ್ಟ ಕುರಿತು ಪರಿಶೀಲಿಸುತ್ತದೆ ಹಾಗೂ ವಿವಿಧ ಬರ ನಿರ್ವಹಣೆ ಕಾರ್ಯಚಟುವಟಿಕೆಗಳ ಪ್ರಗತಿ ಕುರಿತು ಮಾಹಿತಿ ಪಡೆದು ಬರ ನಿರ್ವಹಣೆಗೆ ಬೇಕಾದ ಸಲಹಾ ಸೂಚನೆಗಳನ್ನು ನೀಡಲಾಗುತ್ತಿದೆ.

6) ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯದ ಬರ ನಿರ್ವಹಣೆ ಕೈಪಿಡಿ 2020 ರನ್ವಯ ಜೂನ್ 1 ರಿಂದ ಆಗಸ್ಟ್ 19 ರ ವರೆಗಿನ ಅವಧಿಗೆ ಎಲ್ಲಾ ಮಾನದಂಡಗಳನ್ನು ವಿಶ್ಲೇಷಿಸಿ 195 ತಾಲ್ಲೂಕುಗಳನ್ನು ಬರ ಪರಿಸ್ಥಿತಿ ಕಂಡುಬಂದಿರುವ ತಾಲ್ಲೂಕುಗಳೆಂದು ಗುರುತಿಸಿ ಈ ತಾಲ್ಲೂಕುಗಳಲ್ಲಿ ಬೆಳೆ ಸಮೀಕ್ಷೆ ದೃಢೀಕರಣ (GT) ಕೈಗೊಂಡು 195 ತಾಲ್ಲೂಕುಗಳನ್ನು ದಿನಾಂಕ:13-9-2023ರಂದು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಿ, ದಿನಾಂಕ:22-9-2023ರಂದು ರೂ.4860.13 ಕೋಟಿಗಳನ್ನು NDRF ರಡಿ ಆರ್ಥಿಕ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೊರಾಂಡಮ್ ಸಲ್ಲಿಸಲಾಯಿತು.

7) ಜೂನ್ ರಿಂದ ಸೆಪ್ಟೆಂಬರ್ ಅಂತ್ಯದ ಅವಧಿಗೆ ಎಲ್ಲಾ ಮಾನದಂಡಗಳನ್ನು ವಿಶ್ಲೇಷಿಸಿ 21 ತಾಲ್ಲೂಕುಗಳನ್ನು ಬರ ಪರಿಸ್ಥಿತಿ ಕಂಡುಬಂದಿರುವ ತಾಲ್ಲೂಕುಗಳೆಂದು ಗುರುತಿಸಿ ಈ ತಾಲ್ಲೂಕುಗಳಲ್ಲಿ ಬೆಳೆ ಸಮೀಕ್ಷೆ ದೃಢೀಕರಣ (GT) ಕೈಗೊಂಡು 21 ತಾಲ್ಲೂಕುಗಳನ್ನು ದಿನಾಂಕ:12-10-2023ರಂದು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಿ, ಮೊದಲನೇ ಮೆಮೊರಾಂಡಮ್‌ರಲ್ಲಿ ಕೋರಲಾದ ರೂ.4860.13 ಕೋಟಿಗಳ ಮೊತ್ತದ ಜೊತೆಗೆ ರೂ.463.74 ಕೋಟಿ ಹಾಗೂ Gratuitous Relief ರೂ.12,577.86 ಕೋಟಿ

ಸೇರಿ ಒಟ್ಟು ರೂ.17,901.73 ಕೋಟಿಗಳ ಆರ್ಥಿಕ ನೆರವು ಕೋರಿ ದಿನಾಂಕ:20-10-2023ರಂದು NDRF ರಡಿ ಆರ್ಥಿಕ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೊರಾಂಡಮ್ ಸಲ್ಲಿಸಲಾಯಿತು.

8) ಜೂನ್ ರಿಂದ ಅಕ್ಟೋಬರ್ ಅಂತ್ಯದ ವರೆಗಿನ ಹವಾಮಾನ ಪರಿಸ್ಥಿತಿ ಅನುಗುಣವಾಗಿ 7 ತಾಲ್ಲೂಕುಗಳನ್ನು ಬರ ಪರಿಸ್ಥಿತಿ ಕಂಡುಬಂದಿರುವ ತಾಲ್ಲೂಕುಗಳೆಂದು ಗುರುತಿಸಿ, ಬೆಳೆ ಸಮೀಕ್ಷೆ ದೃಢೀಕರಣ (GT) ಕೈಗೊಂಡು 7 ತಾಲ್ಲೂಕುಗಳನ್ನು ದಿನಾಂಕ:04-11-2023ರಂದು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಿ, ಮೆಮೊರಾಂಡಮ್‌ರಲ್ಲಿ ಈಗಾಗಲೇ ಕೋರಲಾದ ರೂ.17,901.73 ಕೋಟಿಗಳ ಮೊತ್ತದ ಜೊತೆಗೆ ರೂ.269.71 ಕೋಟಿ ಸೇರಿ ಒಟ್ಟು ರೂ.18,171.44 ಕೋಟಿಗಳ ಆರ್ಥಿಕ ನೆರವು ಕೋರಿ ದಿನಾಂಕ:16-11-2023ರಂದು NDRF ರಡಿ ಆರ್ಥಿಕ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿ ಮೆಮೊರಾಂಡಮ್ ಸಲ್ಲಿಸಲಾಯಿತು.

9) ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯದ ಬರ ನಿರ್ವಹಣೆ ಕೈಪಿಡಿ 2020 ರನ್ವಯ 1 ನೇ ಹಂತದ Mandatory Indicators ಹಾಗೂ 2 ನೇ ಹಂತದ Impact Indicators ರಲ್ಲಿ ಅರ್ಹತೆ ಪಡೆದ ನಂತರ 3 ನೇ ಹಂತದಲ್ಲಿ ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಎಲ್ಲಾ ಜಿಲ್ಲೆಗಳ 2980 ಗ್ರಾಮಗಳಲ್ಲಿ 22,165 ಪ್ಲಾಟ್ ಗಳಲ್ಲಿ ಬೆಳೆ ಪರಿಸ್ಥಿತಿ ದೃಢೀಕರಣ (Ground Truthing) ನಡೆಸಲಾಗಿದೆ. ಇದರ ಅನುಸಾರ ಬರ-ವರ್ಗೀಕರಣ ನಿರ್ಧರಿಸಲಾಗಿದೆ.

10) ಕೇಂದ್ರ ಸರ್ಕಾರವು ರಾಜ್ಯದಿಂದ ಸಲ್ಲಿಸಲಾಗಿದ್ದ Memorandum ಪರಿಗಣಿಸಿ ಕೇಂದ್ರದ ಕೃಷಿ ಮಂತ್ರಾಲಯ, Inter Ministerial Central Team (IMCT) ರಚಿಸಿತು. ಕೃಷಿ ಮಂತ್ರಾಲಯದಿಂದ ಜಂಟಿ ಕಾರ್ಯದರ್ಶಿ ರವರ ನೇತೃತ್ವದಲ್ಲಿ 10 ಜನರ IMCT ತಂಡ ರಾಜ್ಯದ 13 ಜಿಲ್ಲೆಗಳಿಗೆ ದಿನಾಂಕ: 4 ರಿಂದ 09 ನೇ ಅಕ್ಟೋಬರ್ ವರೆಗೆ ಭೇಟಿ ನೀಡಿ ಬರ ಪರಿಸ್ಥಿತಿ ಪರಿವೀಕ್ಷಣೆ ನಡೆಸಿತು. ಕೇಂದ್ರ ತಂಡಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಸಚಿವ ಸಂಪುಟ ಉಪಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ರಾಜ್ಯದಲ್ಲಿನ ಬರ ಪರಿಸ್ಥಿತಿ ಕುರಿತು ಮನವರಿಕೆ ಮಾಡಿ NDRF ಅಡಿಯಲ್ಲಿ ಕೋರಿರುವ ಆರ್ಥಿಕ ನೆರವನ್ನು ಶೀಘ್ರದಲ್ಲಿ ಬಿಡುಗಡೆ ಮಾಡುವಂತೆ ಸೂಚಿಸಿದರು.

11) ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯ ಬರ ನಿರ್ವಹಣೆ ಕೈಪಿಡಿ 2020ರನ್ವಯ ವಿವಿಧ ಅವಧಿಯ ಹವಮಾನ ಪರಿಸ್ಥಿತಿ ಅನುಗುಣವಾಗಿ ಒಟ್ಟಾರೆ ರಾಜ್ಯದ 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳನ್ನು (196 ತೀವ್ರ ಬರ & 27 ಸಾಧರಣ ಬರ) ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.

12) ಮುಂದಿನ ದಿನಗಳಲ್ಲಿ ಕುಡಿಯುವ ನೀರು ಪೂರೈಕೆ, ಗೋಶಾಲೆ & ಮೇವಿನ ಬ್ಯಾಂಕ್ ನಿರ್ವಹಣೆ ಇತರೆ ತುರ್ತು ಬರ ನಿರ್ವಹಣೆ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು 31 ಜಿಲ್ಲೆಗಳಿಗೆ ರೂ.324 ಕೋಟಿ ಗಳನ್ನು ದಿನಾಂಕ:31-10-2023ರಂದು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ ಇದನ್ನು ಒಳಗೊಂಡಂತೆ ದಿನಾಂಕ:27-11-2023 ರನ್ವಯ ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಒಟ್ಟು ರೂ.775.83ಕೋಟಿ ಹಾಗೂ ತಹಶೀಲ್ದಾರ್ ಪಿಡಿ ಖಾತೆಯಲ್ಲಿ ರೂ.119.28 ಕೋಟಿ ಅನುದಾನ ಲಭ್ಯವಿದ್ದು ತುರ್ತು ಬರ ನಿರ್ವಹಣೆಗೆ ಅನುದಾನದ ಕೊರತೆ ಇರುವುದಿಲ್ಲ.

13) ಮುಂದಿನ ದಿನಗಳಲ್ಲಿ ಮೇವಿನ ಕೊರತೆ ಉಂಟಾಗದಂತೆ ಇಲಾಖೆಯ ಯೋಜನೆಗಳ ಮೂಲಕ ರೈತರಿಗೆ ಮೇವಿನ ಬೀಜ ವಿತರಿಸಿ, ಮೇವು ಬೆಳೆಸಲು, ಪ್ರೋತ್ಸಾಹಿಸಲು ಕ್ರಮ ಕೈಗೊಳ್ಳಲಾಗಿದೆ. SDRF ಅಡಿಯಲ್ಲಿ ಮೇವಿನ ಕಿರುಪೊಟ್ಟಣಗಳನ್ನು ನಿಯಮಾನುಸಾರ ಖರೀದಿಸಲು ರೂ.20.00 ಕೋಟಿ ಗಳನ್ನು ಪಶು ಸಂಗೋಪನೆ ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ.

14) ತಾಲ್ಲೂಕು ಮಟ್ಟದಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳ ಮೇವು ನಿರ್ವಹಣೆಗೆ ಹಾಗೂ ಬರ ಪರಿಹಾರ ಕ್ರಮಗಳ ಮೇಲ್ವಿಚಾರಣೆಗಾಗಿ ಶಾಸಕರ ನೇತೃತ್ವದಲ್ಲಿ ತಾಲ್ಲೂಕು ಮಟ್ಟದ ಟಾಸ್ಕ ಫೋರ್ಸ್ ರಚಿಸಲಾಗಿದೆ. ಸದರಿ ಕಾರ್ಯ ಪಡೆಯು ಕಾಲಕಾಲಕ್ಕೆ ಸಭೆಗಳನ್ನು ನಡೆಸಿ ಬರ ನಿರ್ವಹಣೆಯ ಪರಿಸ್ಥಿತಿಯನ್ನು ಪರಿಶೀಲಿಸಲು ಸೂಚನೆ ನೀಡಲಾಗಿದೆ.

16) ಬರ ಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಹಾಗೂ ಮೇವು ಸರಬರಾಜು ಪ್ರಕ್ರಿಯೆಗೆ KTPP ಕಾಯ್ದೆಯಡಿ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗಿದೆ.

17) ಟ್ಯಾಂಕರ್ ಮೂಲಕ ಹಾಗೂ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ತುರ್ತು ಕುಡಿಯುವ ನೀರು ಪೂರೈಕೆಗೆ ಹಾಗೂ ಜಾನುವಾರು ಸಂರಕ್ಷಣೆಗಾಗಿ ಗೋಶಾಲೆ ಹಾಗೂ ಮೇವಿನ ಬ್ಯಾಂಕ್‌ಗಳನ್ನು ಅಗತ್ಯತೆಯ ಅನುಗುಣವಾಗಿ ತೆರೆಯಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಇದಕ್ಕೆ ಸಂಬಂಧಿಸಿದಂತೆ 15 ದಿನದೊಳಗೆ ಬಿಲ್ಲು ಪಾವತಿ ಮಾಡಲು ಕ್ರಮ ವಹಿಸಲು ಸೂಚಿಸಲಾಗಿದೆ.

18) ಮುಂದಿನ ದಿನಗಳಲ್ಲಿ ಜಾನುವಾರುಗಳಿಗೆ ಅಗತ್ಯವಿರುವ ಮೇವಿನ ಕೊರತೆ ನೀಗಿಸಲು ರಾಜ್ಯದಲ್ಲಿ ರೈತರ ಬಳಿ ಇರುವ ಮೇವು ಇತರ ರಾಜ್ಯಗಳಿಗೆ ಮಾರಾಟವಾಗದಂತೆ / ಸಾಗಣಿಕೆ ಮಾಡದಂತೆ ನಿರ್ಬಂಧಿಸಲು ಆದೇಶ ಹೊರಡಿಸಲಾಗಿದೆ.

19) ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ಕಾಲಕಾಲಕ್ಕೆ ಬರ ನಿರ್ವಹಣೆಯ ಕುರಿತು ಸಭೆಗಳನ್ನು ನಡೆಸಿ ವಾಸ್ತವಿಕ ಪರಿಸ್ಥಿತಿಯ ಪರಿಶೀಲನೆಗಾಗಿ ಸಭೆ ನಡೆಸಲು ಸೂಚಿಸಲಾಗಿದೆ.

20) ರಾಜ್ಯದಲ್ಲಿನ ಬರ ಪರಿಸ್ಥಿತಿ ಉಪ ಶಮನಗೊಳಿಸಲು ರಾಜ್ಯ ವಿಪತ್ತು ಉಪಶಮನ ನಿಧಿ (SDMF) ರಡಿ ಕೃಷಿ ಭಾಗ್ಯ ಯೋಜನೆಯ ಅನುಷ್ಠಾನಕ್ಕಾಗಿ ಕೃಷಿ ಇಲಾಖೆಗೆ ರೂ.100.00 ಕೋಟಿಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆ.

22) ರಾಜ್ಯದಲ್ಲಿ ಬರ-ಪರಿಸ್ಥಿತಿ ಇರುವುದರಿಂದ RBI ನಿರ್ದೇಶನದಂತೆ ರೈತರ ಬೆಳೆ ಸಾಲದ ಮರುಪಾವತಿ ಅವಧಿಯನ್ನು ಅಲ್ಪಾವಧಿಯಿಂದ ಮಧ್ಯಾವಾವಧಿ / ದೀರ್ಘಾವದಿಗೆ Re-structure ಮಾಡಲು SLBC ಗೆ ಸೂಚಿಸಲಾಗಿದೆ.

23) ಬರ-ಪರಿಸ್ಥಿತಿಯ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದಿಂದ NDRF ಅನುದಾನವನ್ನು ನಿರೀಕ್ಷಿಸಿ SDRF/NDRF ಮಾರ್ಗಸೂಚಿಗಳ ಪ್ರಕಾರ ಬೆಳೆ ಹಾನಿ ಪರಿಹಾರದ ಮೊದಲನೇ ಕಂತಾಗಿ / ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗುಣವಾಗಿ ರೂ.2,000/- ರವರೆಗೆ ರೈತರಿಗೆ ಪಾವತಿಲು ತೀರ್ಮಾನಿಸಲಾಗಿದೆ.

****